## Prajavani

**Date:** 04-01-2017 **Page No. 10**

Edition: Mysore **Language: Kannada**


# ಫೆ. 3ರಿಂದ ರಾಷ್ಟ್ರೀಯ ಚರ್ಚಾ ಸ್ಪರ್ಧೆ

ಹಾಸನ: ಮೈಸೂರಿನ ಧರ್ಮಸ್ಥಳ ಮಂಜುನಾಥೇಶ್ವರ ಇನ್‌ಸ್ಟಿಟ್ಯೂಟ್ ಫಾರ್ ಮ್ಯಾನೇಜ್‌ಮೆಂಟ್ ಡೆವಲೆಪ್‌ಮೆಂಟ್ (ಎಸ್‌ಡಿ ಎಂಐಎಂಡಿ) ಹಾಗೂ ರೋಟರಿ ಮಿಡ್ ಟೌನ್ ವತಿಯಿಂದ ವೈ. ಭಗವಾನ್ ಸ್ಮಾರಕ 5ನೇ ರಾಷ್ಟ್ರ ಮಟ್ಟದ ಆಂಗ್ಲ ಭಾಷೆಯ ಚರ್ಚಾ ಸ್ಪರ್ಧೆಯನ್ನು ಫೆ. 3 ಹಾಗೂ 4 ರಂದು ಮೈಸೂರಿನ ಎಸ್‌ಡಿಎಂಐಎಂಡಿಯಲ್ಲಿ ಆಯೋಜಿಸಲಾಗಿದೆ.

ಪದವಿ ಹಾಗೂ ಸ್ನಾತಕೋತ್ತರ ವಿದ್ಯಾರ್ಥಿಗಳು ಭಾಗವಹಿಸಲು ಅವಕಾಶವಿದೆ. ವಿಜೇತ ವಿದ್ಯಾರ್ಥಿಗಳಿಗೆ ಟ್ರೋಫಿಯ ಜೊತೆಗೆ ₹ 1 ಲಕ್ಷ ಬಹುಮಾನ ನೀಡಲಾಗುವುದು. ಒಂದು ಸಂಸ್ಥೆಯಿಂದ ಇಬ್ಬರು ಸದಸ್ಯರಿರುವ ಎರಡು ತಂಡಗಳು ಭಾಗವಹಿಸಲು ಅವಕಾಶವಿದೆ. ಎಲ್ಲ ಸ್ನಾತಕ ಮತ್ತು ಸ್ನಾತಕೋತ್ತರ ವಿದ್ಯಾರ್ಥಿಗಳು ಭಾಗವಹಿಸಬಹುದು. debate@sdmimd.ac.in ಇಮೇಲ್ ಮೂಲಕ ಜ. 30ರ ಒಳಗೆ ಹೆಸರು ನೋಂದಾಯಿಸಿ ಕೊಳ್ಳಬೇಕು.

ಮಾಹಿತಿಗೆ ಮೊ: 88803 77776 ಸಂಪರ್ಕಿಸಬಹುದು.